**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 2271/2025 ಸಿ.ಡಬ್ಲೂ.1 ಪಿ.ಡಬ್ಲೂ.4

| | |
|---|---|
| ಹೆಸರು | ಸವಿತಾ |
| ತಂದೆ/ಗಂಡ | ಮಲ್ಲಿಕಾರ್ಜುನ |
| ವಯಸ್ಸು | 30 ವರ್ಷ |
| ಉದ್ಯೋಗ | ಪಿ.ಎಸ್.ಐ |
| ವಾಸಸ್ಥಳ | ಮಾದನ ಹಿಪ್ಪರಗಾ |

ದಿನಾಂಕ 24-01-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ಅಗಷ್ಟ 2024 ರಿಂದ ಇಲ್ಲಿಯವರೆಗೆ ಮಾದನ ಹಿಪ್ಪರಗ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಅಂತಾ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 15-03-2025 ರಂದು ನಾನು ಠಾಣೆಯಲ್ಲಿ ಇದ್ದಾಗ 7.00 ಗಂಟೆ ಸುಮಾರಿಗೆ ದರ್ಗಾ ಶಿರೂರ ಗ್ರಾಮದಲ್ಲಿ ಚೌಗಲೇ ಕಿರಾಣಿ ಅಂಗಡಿ ಹತ್ತಿರ ಸಾವರ್ಜನಿಕ ಸ್ಧಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತ ಬಾತ್ಮಿ ಬಂದಿದ್ದು, ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿ ಪರವಾನಿಗೆ ಪಡೆದುಕೊಂಡು ನಮ್ಮ ಸಿಬ್ಬಂದಿಯವರಾದ ಚಾಸಾ 4 ರವರ ಮೂಲಕ ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆಯಿಸಿ ಮಾಹಿತಿ ತಿಳಿಸಿ ಅವರ ಒಪ್ಪಿ ಕೊಂಡ ಮೇರೆಗೆ ನಂತರ ಚಾಸ-5 ಮತ್ತು 6ರವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ನಮ್ಮ ಸರ್ಕಾರಿ ವಾಹನ ನಂಬರ ಕೆ ಎ 32/ಜಿ -1028 ರಲ್ಲಿ ನಮ್ಮ ಸಿಬ್ಬಂದಿ ಮತ್ತು ಪಂಚರ ಜೊತೆಗೆ ಹೋಗಿ 100 ಮೀಟರ್ ದೂರದಲ್ಲಿ ವಾಹನವನ್ನು ನಿಲ್ಲಿಸಿ ಪರಿಶೀಲನೆ ಮಾಡಿ ಬಾತ್ಮಿಯನ್ನು ಖಚಿತ ಪಡಿಸಿಕೊಂಡು ಸುಮಾರು 08.30 ಗಂಟೆಗೆ ದಾಳಿ ಮಾಡಲಾಗಿ ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಅಂಬಾಜಿ ತಂದೆ ನರಸಿಂಗ್ ಚೌಗ್ಲೆ ಅಂತಾ ತಿಳಿಸಿದ್ದು, ಸಾಕ್ಷಿಯು ಅವರು ನ್ಯಾಯಾಲಯದಲ್ಲಿ ಇರುವ ಆರೋಪಿ ಅಂತಾ ಗುರುತಿಸುತ್ತಾರೆ. ಸದರಿ ವ್ಯಕ್ತಿಗೆ ಪರವಾನಿಗೆ ಬಗ್ಗೆ ವಿಚಾರಿಸಲಾಗಿ ನನ್ನ ಬಳಿ ಪರವಾನಿಗೆ ಇಲ್ಲ ಅಂತಾ ತಿಳಿಸಿರುತ್ತಾರೆ. ನಂತರ ಸದರಿ ವ್ಯಕ್ತಿಯ ಬಳಿ Orginal Choice 90 ML 50 Pouchಗಳು ಮತ್ತು 90 ಎಮ್ ಎಲ್ ಬ್ಯಾಕ್ ಪೈಪರ್ ವಿಸ್ಕಿಯ 12 ಪೌಚಗಳು ಇದ್ದವು ಅವುಗಳನ್ನು ಜಪ್ತಿ ಪಡಿಸಿಕೊಂಡು ಅಂಗಶೋಧನೆ ಮಾಡಿದಾಗ ರೂ. 120/- ಹಣ ದೊರೆತಿರುತ್ತದೆ. ಸದರಿ ಮು.ಮಾಲನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು 08.30 ಗಂಟೆಯಿಂದ 09.30 ಗಂಟೆಯವರೆಗೆ ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತೇವೆ. ನಂತರ ಮುಂದಿನ ಕ್ರಮಕ್ಕಾಗಿ ಆರೋಪಿ, ಮು. ಮಾಲು, ಜಪ್ತಿ ಪಂಚನಾಮೆ ಮತ್ತು ವರದಿಯೊಂದಿಗೆ ಠಾಣಾಧಿಕಾರಿಯ ಚಾಸ-9 ರವರ ಮುಂದೆ ಹಾಜರುಪಡಿಸಿರುತ್ತೇನೆ.

ಸಾಕ್ಷಿಯು ದೂರಿನ ಮೇಲೆ ಇರುವ ಅವರ ಸಹಿ ನೋಡಿ ಗುರುತಿಸಿದ್ದು ದೂರನ್ನು ನಿಪಿ. 4 ಸಾಕ್ಷಿಯ ಸಹಿಯನ್ನು ಗುರುತಿಸಿದ್ದು ಅದನ್ನು ನಿಪಿ. 4(ಎ) ಅಂತಾ ಗುರುತಿಸಲಾಯಿತು. ಸಾಕ್ಷಿಯು ನಿಪಿ. 1 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1(ಬಿ) ಅಂತಾ ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ. 2 ರಲ್ಲಿ ತಾವು ಇರುವುದಾಗಿ ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ. 1 ರಿಂದ 3 ನೋಡಿ ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಎಸ್ ಬಿ.ಪಿ ವಕೀಲರಿಂದ:</u>

ನಾವು ಬಾತ್ಮಿ ಬಂದ ಸ್ಥಳಕ್ಕೆ ಮಾದನ ಹಿಪ್ಪರಗ ಗ್ರಾಮದಿಂದ ದರ್ಗಾಶಿರೂರ ಮಾರ್ಗವಾಗಿ ಹೋಗಿರುತ್ತೇವೆ. ಬಾತ್ಮಿ ಬಂದ ಸ್ಥಳಕ್ಕೆ ಹೋಗಲು ಠಾಣೆಯಿಂದ ಅರ್ಧ ಗಂಟೆ ಬೇಕಾಗುತ್ತದೆ. ನಾವು ಬಾತ್ಮಿ ಬಂದ ನಂತರ ಸ್ವಲ್ಪ ಸಮಯ ತಡೆದು ಪಂಚರನ್ನು ಠಾಣೆಗೆ ಕರೆಯಿಸಿ ವಿಷಯ ತಿಳಿಸಿರುತ್ತೇವೆ. ನಾವು ಆರೋಪಿಯನ್ನು ದೂರದಿಂದ ನೋಡುವಾಗ ಅಲ್ಲಿ ಖರೀದಿ ಮಾಡಲು 2 ರಿಂದ 3 ಜನರು ಇದ್ದರು ನಾವು ದಾಳಿ ಮಾಡುವಾಗ ಅವರು ಓಡಿ ಹೋಗಿರುತ್ತಾರೆ. ನಾವು ಆರೋಪಿಯನ್ನು ಹಿಡಿಯಬೇಕು ಎನ್ನುವ ಉದ್ದೇಶದಿಂದ ಸದರಿಯವರನ್ನು ಹಿಡಿಯುವ ಪ್ರಯತ್ನ ಮಾಡಿರಲಿಲ್ಲ. ದಾಳಿ ಮಾಡಲು ಒಬ್ಬರು ಜೀಪ್ ಚಾಲಕರು ಮತ್ತು ಇಬ್ಬರನ್ನು ಸಹಾಯಕರಾಗಿ ಕರೆದುಕೊಂಡು ಹೋಗಿರುತ್ತೇನೆ. ಆರೋಪಿಯು ಮು.ಮಾಲುಗಳನ್ನು ಒಂದು ಡಬ್ಬಿಯಲ್ಲಿ ಇಟ್ಟು ಮಾರಟ ಮಾಡುತ್ತಿದ್ದನು. Orginal Choice 90 ML 50 Pouchಗಳು ಮತ್ತು 90 ಎಮ್ ಎಲ್ ಬ್ಲಾಕ್ ಪೈಪರ್ ವಿಸ್ಕಿಯ 12 ಪೌಚಗಳು ಬೇರೆ ಬೇರೆ ಡಬ್ಬಿಯಲ್ಲಿ ಇದ್ದವು. ಮು.ಮಾಲು ಜಪ್ತಿಪಡಿಸುವಾಗ ಸದರಿ ಮಾಲುಗಳನ್ನು ಜಪ್ತಿಪಡಿಸಿರುವುದಿಲ್ಲ. ನಾನು ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ ಠಾಣಾ ಅಂಖ್ಯೆ ಸಂಖ್ಯೆ ಹೆಚ್ಚಿ ಸಲು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ ರೂ. 120/- ಮುಖಬೆಲೆ ಎಂದರೆ 100 ರೂಪಾಯಿ ಒಂದು ನೋಟು 20 ಒಂದು ನೋಟು ಇತ್ತು. ಬಾತ್ಮಿ ಸ್ಥಳದ ಚೆಕ್ಕುಬಂದಿ ಎಂದರೆ ಪೂರ್ವಕ್ಕೆ ಆರೋಪಿಗೆ ಸಂಬಂದಿಸಿದ ಶೆಡ್ ಪಶ್ಚಿಮಕ್ಕೆ ಮಾದನಹಿಪ್ಪರಗದಿಂದ ಆಳಂದಕ್ಕೆ ಮುಖ್ಯ ರಸ್ತೆ. ಉತ್ತರ ಮತ್ತು ದಕ್ಷಿಣಕ್ಕೆ ಖಾಲಿ ಜಾಗ. ಘಟನಾ ಸ್ಥಳದ ಸಂಖ್ಯೆಯನ್ನು ನಾನು ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ ಎಂದರೆ ಸರಿ. ಮು.ಮಾ.-1 ಮತ್ತು 2 ಸಾಮನ್ಯವಾಗಿ ಎಲ್ಲಾಕಡೆ ಸಿಗುತ್ತವೆ ಎಂದರೆ ಸರಿಯಲ್ಲ. ದಿಃ 15-03-2025 ರಂದು ನಾನು ಠಾಣೆಯಲ್ಲಿ ಇದ್ದಾಗ 7.00 ಗಂಟೆ ಸುಮಾರಿಗೆ ದರ್ಗಾ ಶಿರೂರ ಗ್ರಾಮದಲ್ಲಿ ಚೌಗಲೇ ಕಿರಾಣಿ ಅಂಗಡಿ ಹತ್ತಿರ ಸಾವರ್ಜನಿಕ ಸ್ದಳದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಅಂತಾ ಖಚಿತ ಬಾತ್ಮಿ ಬಂದಿದ್ದು, ಮೇಲಾಧಿಕಾರಿಗಳಿಗೆ ಮಾಹಿತಿ ತಿಳಿಸಿ ಪರವಾನಿಗೆ ಪಡೆದುಕೊಂಡು ನಮ್ಮ ಸಿಬ್ಬಂದಿಯವರಾದ ಚಾಸಾ 4 ರವರ ಮೂಲಕ ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆಯಿಸಿ ಮಾಹಿತಿ ತಿಳಿಸಿ ಅವರ ಒಪ್ಪಿ ಕೊಂಡ ಮೇರೆಗೆ ನಂತರ ಚಾಸ-5 ಮತ್ತು 6ರವರನ್ನು ಕರೆದುಕೊಂಡು ಬಾತ್ಮಿ ಬಂದ ಸ್ಥಳಕ್ಕೆ ನಮ್ಮ ಸರ್ಕಾರಿ ವಾಹನ ನಂಬರ ಕೆ ಎ 32/ಜಿ -1028 ರಲ್ಲಿ ನಮ್ಮ ಸಿಬ್ಬಂದಿ ಮತ್ತು ಪಂಚರ ಜೊತೆಗೆ ಹೋಗಿ 100 ಮೀಟರ್ ದೂರದಲ್ಲಿ ವಾಹನವನ್ನು ನಿಲ್ಲಿಸಿ ಪರಿಶೀಲನೆ ಮಾಡಿ ಬಾತ್ಮಿಯನ್ನು ಖಚಿತ ಪಡಿಸಿಕೊಂಡು ಸುಮಾರು 08.30 ಗಂಟೆಗೆ ದಾಳಿ ಮಾಡಲಾಗಿ ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಅಂಬಾಜಿ ತಂದೆ ನರಸಿಂಗ್ ಚೌಗ್ಲೆ ಅಂತಾ ತಿಳಿಸಿದ್ದು, ಸಾಕ್ಷಿಯು ಅವರು ನ್ಯಾಯಾಲಯದಲ್ಲಿ ಇರುವ

ಆರೋಪಿ ಅಂತಾ ಗುರುತಿಸುತ್ತಾರೆ. ಸದರಿ ವ್ಯಕ್ತಿಗೆ ಪರವಾನಿಗೆ ಬಗ್ಗೆ ವಿಚಾರಿಸಲಾಗಿ ನನ್ನ ಬಳಿ ಪರವಾನಿಗೆ ಇಲ್ಲ ಅಂತಾ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸದರಿ ವ್ಯಕ್ತಿಯ ಬಳಿ Orginal Choice 90 ML 50 Pouchಗಳು ಮತ್ತು 90 ಎಮ್ ಎಲ್ ಬ್ಲಾಕ್ ಪೈಪರ್ ವಿಸ್ಕಿಯ 12 ಪೌಚಗಳು ಇದ್ದವು ಅವುಗಳನ್ನು ಜಪ್ತಿ ಪಡಿಸಿಕೊಂಡು ಅಂಗಶೋಧನೆ ಮಾಡಿದಾಗ ರೂ. 120/- ಹಣ ದೊರೆತಿರುತ್ತದೆ. ಸದರಿ ಮು.ಮಾಲನ್ನು ಪಂಚರ ಸಮಕ್ಷಮ ಜಪ್ತಿ ಪಡಿಸಿಕೊಂಡು 08.30 ಗಂಟೆಯಿಂದ 09.30 ಗಂಟೆಯವರೆಗೆ ಪಂಚರ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮುಂದಿನ ಕ್ರಮಕ್ಕಾಗಿ ಆರೋಪಿ, ಮು. ಮಾಲು, ಜಪ್ತಿ ಪಂಚನಾಮೆ ಮತ್ತು ವರದಿಯೊಂದಿಗೆ ಠಾಣಾಧಿಕಾರಿಯ ಚಾಸ-9 ರವರ ಮುಂದೆ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ..

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

**ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ**